ದಿನಾಂಕಃ 21.11.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ಶ್ರೀ ಎನ್.ಎಸ್.ಜಿ. ವಕೀಲರಿಂದ:**

ಗೌಡಹಳ್ಳಿಯ ಮಂಜಾಚಾರ್ ರವರ ಪರಿಚಯ ನನಗಿದೆ. ಅದೇ ಊರಿನ ಕಾಳಾಚಾರ್ ರವರ ಮಗ ಜಿ.ಕೆ. ಕೃಷ್ಣಾಚಾರ್ ರವರ ಪರಿಚಯವು ಸಹಾ ನನಗಿದೆ. ಜಿ.ಎಂ. ಮಹೇಶ್ ಎನ್ನುವವರು ಮಂಜಾಚಾರ್ ರವರ ಮಗ ಎಂದರೆ ಸರಿ. ನನ್ನ ಗಂಡನ ತಮ್ಮನ ಹೆಸರು ಜಿ.ಎಂ.ರಾಮಚಂದ್ರ ಆಚಾರ್ ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ಗಂಡನ ತಂಗಿ ಎಂದರೆ ಸರಿ. ಮಹೇಶ್ ರವರ ತಂದೆ ಮಂಜಾಚಾರ್ ಹಾಗೂ ನನ್ನ ಗಂಡನ ತಂದೆಯಾದ ಮಂಜಾಚಾರ್ ರವರು ಇಬ್ಬರು ಬೇರೆ ಬೇರೆ ವ್ಯಕ್ತಿಗಳಾಗಿದ್ದು ಒಂದೇ ಕುಟುಂಬದವರು ಎಂದರೆ ಸರಿ. ನನ್ನ ಗಂಡ ಹಾಗೂ ಜಿ.ಎಂ. ರಾಮಚಂದ್ರ ಆಚಾರ್ ರವರ ನಡುವೆ ವಿಭಾಗವಾಗಿದ್ದು 4 ನೇ ಪ್ರತಿವಾದಿಯೊಂದಿಗೆ ಆ ರೀತಿ ವಿಭಾಗ ಆಗಿಲ್ಲ. ಜಿ.ಎಂ. ರಾಮಚಂದ್ರ ಆಚಾರ್ ರವರ ಮನೆ ನನ್ನ ಮನೆಯ ಸಮೀಪದಲ್ಲಿ ಇದ್ದು ಅವರ ಮನೆ ಯಾವ ಸರ್ವೇ ನಂಬರ್ ಜಾಗದಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸಿದ್ದಮ್ಮ ಎನ್ನುವವರು ನನ್ನ ಅತ್ತೆ ಎಂದರೆ ಸರಿ. ಸಿದ್ದಮ್ಮ, ನನ್ನ ಗಂಡ, ಜಿ.ಎಂ.ರಾಮಚಂದ್ರ ಆಚಾರ್ ಮತ್ತು 4 ನೇ ಪ್ರತಿವಾದಿ 1995 ಪಂಚಾಯ್ತುದಾರರ ಸಮಕ್ಷಮ ಆಸ್ತಿಗಳ ವಿಭಾಗದ ಬಗ್ಗೆ ತೀರ್ಮಾನ ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ಗೊತ್ತಿದ್ದರು ಸಹಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹೆಚ್.ಜಿ. ಅಶೋಕ್, ನಿಂಗಾಚಾರ್, ಭಾಸ್ಕರಾಚಾರ್, ಜಿ.ಎಂ. ನಾರಾಯಣ, ಚಂದ್ರಚಾರ್ ರವರ ಪರಿಚಯ ನನಗಿಲ್ಲ. ಸದರಿರವರುಗಳ ಸಮಕ್ಷಮದಲ್ಲಿ ಮೇಲೆ ಹೇಳಿದಂತೆ 1995 ರಲ್ಲಿ ವಿಭಾಗದ ಸಂಬಂಧ ತೀರ್ಮಾನ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಹಾಗೂ ರಾಮಚಂದ್ರ ಆಚಾರ್ ರವರ ನಡುವೆ ವಿಭಾಗ ಆಗಿದೆ ಎಂದು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಸಿದ್ದಮ್ಮ ರವರ ಹೆಸರಿಗೆ ಇದ್ದ ಮನೆ ವಿಭಾಗದಲ್ಲಿ ನನ್ನ ಗಂಡನಿಗೆ ಬಂದಿತ್ತು ಎಂದರೆ ಸಾಕ್ಷಿಯು ಆ ಮನೆ ಮಂಜಾಚಾರ್ ರವರ ಹೆಸರಿನಲ್ಲಿ ಇದ್ದು, ಅಲ್ಲಿ ನಾನು ವಾಸವಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಮನೆ ಯಾವ ಸರ್ವೇ ನಂಬರ್ ಜಾಗದಲ್ಲಿ ಇದೆ ಎಂದು ನನಗೆ ನೆನಪಿಲ್ಲ. ವಿಭಾಗಕ್ಕೂ ಮುನ್ನ ನನ್ನ ಗಂಡ ಮತ್ತು ಜಿ.ಎಂ.ರಾಮಚಂದ್ರ ಆಚಾರ್ ರವರು ಒಂದೇ ಮನೆಯಲ್ಲಿ ವಾಸವಿದ್ದರು ಎಂದರೆ ಸರಿ. 1995 ರಲ್ಲಿ ಆದ ವಿಭಾಗದಂತೆ ಜಿ.ಎಂ.ರಾಮಚಂದ್ರ ಆಚಾರ್ ರವರು ನನ್ನ ಗಂಡನಿಗೆ ಮನೆ ಬಿಟ್ಟುಕೊಡಲು ರೂ.25,000/- ಹಣ ಕೊಡಬೇಕು ಎಂದು ಮಾತಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಹಣವನ್ನು ನಾವು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಆ ರೀತಿ ಹಣ ಪಡೆದುಕೊಂಡ ನಂತರ ಜಿ.ಎಂ.ರಾಮಚಂದ್ರ ಆಚಾರ್ ರವರು ಪ್ರತ್ಯೇಕ ಮನೆ ಮಾಡಿಕೊಂಡು ವಾಸವಿದ್ದಾರೆ ಎಂದರೆ ಸರಿ.

ದಿ.21.10.2006 ರಲ್ಲಿ ನನ್ನ ಗಂಡ ಮೃತರಾದರು. ನನ್ನ ಗಂಡನ ಜೀವಿತ ಕಾಲದಲ್ಲಿಯೇ ಜಿ.ಎಂ.ರಾಮಚಂದ್ರ ಆಚಾರ್ ರವರಿಗೆ ಸಂಪೂರ್ಣ ಹಣ ಕೊಟ್ಟಿದ್ದೆವು. 1990 ರಲ್ಲಿ ಆದ ವಿಭಾಗ ತೀರ್ಮಾನದಂತೆ ದಾವ ಶೆಡ್ಯೂಲ್ ಐಟಂ.ನಂ.2 ರ ಜಮೀನನ್ನು 4 ನೇ ಪ್ರತಿವಾದಿಗೆ ಕೊಡಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡ ಹಾಗೂ ಜಿ.ಎಂ.ರಾಮಚಂದ್ರ ಆಚಾರ್ ರವರ ನಡುವೆ ಆದ

ವಿಭಾಗಕ್ಕೆ 4 ನೇ ಪ್ರತಿವಾದಿ ಪಕ್ಷಕಾರರಲ್ಲ. ಸದರಿ ವಿಭಾಗದಲ್ಲಿ ದಾವ ಐಟಂ.ನಂ.2 ರ ಜಮೀನನ್ನು ನನ್ನ ಗಂಡನ ಹೆಸರಿಗೆ ತೋರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವ ಐಟಂ.ನಂ.2 ರ ಜಮೀನಿನ ಖಾತೆ ಈಗ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. 1995 ರಲ್ಲಿ ಆದ ವಿಭಾಗ ತೀರ್ಮಾನದಂತೆ ನಾನು ದಾವ ಐಟಂ.ನಂ.2 ರ ಜಮೀನನ್ನು 4 ನೇ ಪ್ರತಿವಾದಿಗೆ ಬಿಟ್ಟುಕೊಡುವ ಬಾಧ್ಯಸ್ತಿಕೆ ಹೊಂದಿದ್ದೇನೆ ಎಂದರೆ ಸರಿಯಲ್ಲ. ನಾನು 4 ನೇ ಪ್ರತಿವಾದಿಯೊಂದಿಗೆ ಮಾತನಾಡುತ್ತಿಲ್ಲ. ವಾದಿಯನ್ನು 4 ನೇ ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆ ಕಾಲಕ್ಕೆ ವಾದಿ ನನ್ನ ಮತ್ತು ನನ್ನ ಗಂಡನೊಂದಿಗೆ ವಾಸವಿರಲಿಲ್ಲ. ನನ್ನ ಮದುವೆ ಸಮಯಕ್ಕೆ ವಾದಿಗೆ 18 ವರ್ಷ ವಯಸ್ಸು ಆಗಿರಲಿಲ್ಲ ಎಂದರೆ ಸರಿ. ವಾದಿಯನ್ನು 4 ನೇ ಪ್ರತಿವಾದಿಯೇ ನೋಡಿಕೊಂಡು ಅವರ ಮದುವೆಯನ್ನು ಸಹಾ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 4 ನೇ ಪ್ರತಿವಾದಿ ನಾನು ನನ್ನ ಗಂಡನನ್ನು ಮದುವೆಯಾಗಿಲ್ಲ ಸುಳ್ಳು ವಂಶವೃಕ್ಷ ಬರೆಸಿದ್ದಾರೆ ಎಂದು ನುಡಿಯುತ್ತಾರೆ.

ದಾವ ಸ್ವತ್ತುಗಳ ಖಾತೆ ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವ ಜಮೀನುಗಳ ಖಾತೆಯನ್ನು ನನ್ನ ಹೆಸರಿಗೆ ಮಾಡಿಸಿಕೊಳ್ಳುವಾಗ ವಾದಿ ನನ್ನ ಗಂಡನ ಮೊದಲನೇ ಪತ್ನಿಯ ಮಗಳು ಎಂದು ವಂಶವೃಕ್ಷ ಬರೆಸಿರಲಿಲ್ಲ. ನಾನು ಸುಳ್ಳು ವಂಶವೃಕ್ಷವನ್ನು ನೀಡಿ ನನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ವಾದಿ ಮತ್ತು 4 ನೇ ಪ್ರತಿವಾದಿ ನನಗೆ ಗೊತ್ತಿಲ್ಲ ಎಂದು ಬರೆಸಿದ್ದೇನೆ ಎಂದರೆ ಸರಿ. 1995 ರಲ್ಲಿ ಆದ ವಿಭಾಗ ತೀರ್ಮಾನದ ಅಸಲು ಪ್ರತಿ ನನ್ನ ಬಳಿ ಇದೆ ಎಂದರೆ ಸರಿಯಲ್ಲ. ದಾವ ಐಟಂ.ನಂ.2 ರ ಸ್ವತ್ತನ್ನು 4 ನೇ ಪ್ರತಿವಾದಿಗೆ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಗಂಡ ಮತ್ತು ಅತ್ತೆಯ ಸಹಿಯನ್ನು ಗುರುತಿಸಲು ಆಗುವುದಿಲ್ಲ. ನನ್ನ ಗಂಡನ ಜೀವಿತ ಕಾಲದಲ್ಲಿ 4 ನೇ ಪ್ರತಿವಾದಿಯನ್ನು ನಮ್ಮ ಮನೆಗೆ ಕರೆದು ಕಳುಹಿಸುವುದನ್ನು ಮಾಡುತ್ತಿರಲಿಲ್ಲ. ಆಸ್ತಿ ಕೊಡಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಗಂಡನನ್ನು ಮದುವೆಯಾದ ದಿನದಿಂದ ವಾದಿ ಮತ್ತು 4 ನೇ ಪ್ರತಿವಾದಿಯನ್ನು ದೂರ ಇಟ್ಟಿದ್ದೇನೆ ಎಂದರೆ ಸರಿಯಲ್ಲ. ವಿಭಾಗದಲ್ಲಿ 4 ನೇ ಪ್ರತಿವಾದಿಯ ಹಿಸ್ಸೆಗೆ ಕೊಟ್ಟಿದ್ದ ದಾವ ಐಟಂ.ನಂ.2 ರ ಜಮೀನನ್ನು 4 ನೇ ಪ್ರತಿವಾದಿಯ ಪರವಾಗಿ ನನ್ನ ಗಂಡನೇ ನೋಡಿಕೊಂಡು 4 ನೇ ಪ್ರತಿವಾದಿಯೊಂದಿಗೆ ಜಂಟಿ ಅನುಭವದಲ್ಲಿ ಇದ್ದರು ಎಂದರೆ ಸರಿಯಲ್ಲ.

4 ನೇ ಪ್ರತಿವಾದಿಗೆ ಜಿ.ಎಂ.ರಾಮಚಂದ್ರ ಆಚಾರ್ ರವರ ಮನೆಗೆ ಹೋಗುತ್ತಾರ ಎಂದು ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿಗೆ ದಾವ ಐಟಂ.ನಂ.2 ರ ಜಮೀನನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್.ಜೆ. ಅಶೋಕ್, ನಿಂಗಾಚಾರ್, ಭಾಸ್ಕರಾಚಾರ್, ಜಿ.ಎಂ. ನಾರಾಯಣ, ಚಂದ್ರಚಾರ್ ರವರ ಪರಿಚಯ ನನಗಿದ್ದರು ಸಹಾ ಅವರ ಪರಿಚಯ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.